೨) ಸಾರಿಗೆ ವಾಹನಗಳಿಗೆ ಅರ್ಹತಾ ಪತ್ರ ಕೊಡುವುದಕ್ಕೆ ಮುಂಚೆ ವಾಹನವನ್ನು ಸಂಪೂರ್ಣವಾಗಿ ತಪಾಸಣೆ ಮಾಡುವುದು,

೩) ಹೆಚ್ಚು ಜನರನ್ನು ಮತ್ತು ಹೆಚ್ಚು ಸಾಗಾಣಿಕೆಯನ್ನು ಕೊಂಡ್ಯೊಯುವ ಮತ್ತು ಅನರ್ಹವಾದ ವಾಹನಗಳನ್ನು ಪರಿಶೋಧಿಸಲು ತೀವ್ರ ಕ್ರಮ ತೆಗೆದುಕೊಳ್ಳುವುದು.

ಶ್ರೀ ಬಿ.ಎಂ. ಇದಿನಬ್ಬ.—ತಮ್ಮ ಉತ್ತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೩ನೇ ಇಸವಿಯಲ್ಲಿ ೭೩೨, ೧೯೮೪ನೇ ಇಸವಿಯಲ್ಲಿ ೯೦೩ ಹಾಗೂ ೧೯೮೫ನೇ ಇಸವಿಯಲ್ಲಿ ೨೧೦ ಅಪಘಾತಗಳು ಸಾರಿಗೆ ಇಲಾಖೆಯಲ್ಲಿ ಆಗಿವೆ ಎಂಬುದಾಗಿ ಹೇಳಿದ್ದಾರೆ. ಆದರೆ ಸಾರ್ವಜನಿಕ ಸಂಭವಿಸಿದ ಅಪಘಾತಗಳು ೧೯೮೩ನೇ ಇಸವಿಯಲ್ಲಿ ೧೪೪. ೧೯೮೪ನೇ ಇಸವಿಯಲ್ಲಿ ೧೯೨ ಹಾಗೂ ೧೯೮೫ನೇ ಇಸವಿಯಲ್ಲಿ೫೩ ಎಂಬುದಾಗಿಯೂ ಕೂಡ ಹೇಳಿದ್ದಾರೆ. ಅಂದರೆ ಪ್ರತಿ ವರ್ಷ ಇದು ಹೆಚ್ಚು ಆಗುತ್ತಾ ಹೋಗುತ್ತದೆ. ಪ್ರತಿ ವರ್ಷ ಈ ಅಪಘಾತಗಳು ಆಗುತ್ತಿರುವುದಕ್ಕೆ ಕಾರಣ ಏನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಪಿ.ಜಿ ಆರ್. ಸಿಂಧ್ಯ.—ಅಪಘಾತಗಳು ಆಕಸ್ಮಿಕವಾಗಿ ಆಗತಕ್ಕಂತಹವ್ದು. ಆಗದೆ ಇರುವುದಕ್ಕೆ ಏನೇನು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳೆಲ್ಲವನ್ನೂ ತೆಗೆದುಕೊಂಡಿದ್ದೇವೆ. ಮತ್ತೆ ಪ್ರತಿಯೊಂದು ವಾಹನ ಫಿಟ್‌ನೆಸ್ ಸರ್ಟಿಫಿಕೇಟ್ ಅನ್ನು ಇಟ್ಟುಕೊಂಡು ಓಡಿಸದೇ ಇರತಕ್ಕಂತಹ ಎಲ್ಲ ವಾಹನಗಳ ಮೇಲೆ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಯಾರು ಓವರ್‌ಲೋಡಿಂಗ್ ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ವಾಹನ ಚಾಲಕರು ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲ ಅವರ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುವುದಕ್ಕೆ ಸ್ಪಾಟ್‌ಗೆ ಆಗಿ ಎನ್‌ಫೋರ್ಸ್ ಮಾಡಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಂ, ಇದಿನಬ್ಬ,—ಸಂಬಂಧಿಸಿದ ಅಧಿಕಾರಿಗಳು ಜಾಗ್ರತೆ ಕಟ್ಟು ನಿಟ್ಟಾದ ಕ್ರಮಕ್ಕೆಗೊಳ್ಳದೆ ಇರುವುದು ಮತ್ತು ಕೂಡುಕರು ವಾಹನಗಳನ್ನು ಚಾಲಿಸುವ ವಿಚಾರಗಳು ಸರ್ಕಾರದ ಗಮನಕ್ಕೆ ಬಂದಿವೆಯೆ?

ಶ್ರೀ ಪಿ.ಜಿ, ಆರ್. ಸಿಂಧ್ಯ.—ಕೂಡುಕರು ಅಂಥ ಬಂದಿಲ್ಲ. ಕೂಡಿದಿರುವವರು ವಾಹನ ಚಾಲನೆ ಮಾಡುವುದು ಬಂದಿದೆ. ನಿರ್ದಿಷ್ಟವಾಗಿ ದೂರು ಬಂದರೆ ಅಂಥವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೇನೆ, ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ.

ಎನ್ ಆರ್.ಇ.ಪಿ. ಎನ್.ಆರ್.ಡಿ.ಪಿ ಹಾಗೂ ಹೊಸ್ತ ಯೋಜನೆಗಳು

೩೦೨ ಶ್ರೀ ಬಸವರಾಜ ಪಾಟೀಲ (ಹುಮನಾಬಾದ್) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಹಾಗೂವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ನಗರಸಭಾ ಪ್ರದೇಶಗಳಲ್ಲಿ ವಾಸಿಸುವವರಿಗೆ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮ, ರಾಷ್ಟ್ರೀಯ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಹೊಸ್ತ ಯೋಜನೆಗಳು ಅನ್ವಯವಾಗುತ್ತವೆಯೇ

ಆ) ಹಾಗಿಲ್ಲದಿದ್ದಲ್ಲಿ ಅವರ ಆರ್ಥಿಕ ಸಂಧಾರಣೆಗೆ ಹೊಸ ಯೋಜನೆಗಳೇನಾದರೂ ಇವೆಯೇ ಹಾಗಿದ್ದಲ್ಲಿ, ಅವು ಯಾವುವು ಹಾಗೂ ಅವುಗಳನ್ನು ಯಾವಾಗ ಜಾರಿಗೊಳಿಸಲಾಗುವುದು,

ಶ್ರೀ ಪಿ.ಜಿ. ಆರ್. ಸಿಂಧ್ಯ.—(ವಸತಿ ಹಾಗೂ ಸಾರಿಗೆಯ ರಾಜ್ಯ ಮಂತ್ರಿಯವರು)

ಅ) ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮ ಅನ್ವಯಿಸುವುದಿಲ್ಲ. ಹುಡ್ಕೋ ಸಂಸ್ಥೆಯ ಸಹಾಯದ ಗೃಹ ನಿರ್ಮಾಣ ಯೋಜನೆಗಳು ಅನ್ವಯವಾಗುತ್ತವೆ.

ಆ) ಮೇಲೆ ತಿಳಿಸಿದ ಮಾದರಿಯ ಯೋಜನೆಗಳು ನಗರ ಪ್ರದೇಶದ ಜನರಿಗೆ ಅನ್ವಯವಾಗುವಂತೆ ಯಾವುವೂ ಇಲ್ಲ. ಆದರೆ ಹುಡ್ಕೋ ಧನ ಸಹಾಯದ ವಸತಿ ಯೋಜನೆಯನ್ನು ಕರ್ನಾಟಕ ಗೃಹ ಮಂಡಳಿಯು ನಿರ್ದಿಷ್ಟ ನಗರದ ಬೇಡಿಕೆಗನುಗುಣವಾಗಿ ಹಾಗೂ ವಸತಿ ಯೋಜನೆಗೆ ಬೇಕಾದ ಭೂಮಿ ಸಿಗುವುದನ್ನು ಅವಲಂಬಿಸಿ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುತ್ತಿದೆ.

ಶ್ರೀ ಬಸವರಾಜ ಪಾಟೀಲ.—ನಾನು ಪ್ರಶ್ನೆ ಕೇಳಿದ್ದು ಬೇರೆ. ಉತ್ತರ ಬಂದಿರುವುದೇ ಬೇರೆ. ನನ್ನ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವರು ಉತ್ತರಿಸಬೇಕಾಗಿತ್ತು. ಆದರೆ ಸಾರಿಗೆ ಮಂತ್ರಿಗಳು ಹೇಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ಎಷ್ಟು ಆರ್. ಇ. ಪಿ. ಮತ್ತಿತರ ಯೋಜನೆಗಳೀವೆ ಅವು ನಗರಸಭೆಯ ವ್ಯಾಪ್ತಿಯಲ್ಲಿ ಬಾಸಿಸುವ ಜನರಿಗೆ ಇಲ್ಲ. ಅವರಿಗೆ ಬೇರೆ ರೀತಿ ಏನಾದರೂ ಸೌಲಭ್ಯ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನ್ನ ಇಲಾಖೆಯಲ್ಲಿ ಹೌಸಿಂಗ್ ಬೋರ್ಡಿನಿಂದ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಇದೆ. ಹುಬ್ಬಳ್ಳಿ-ಧಾರವಾಡದಲ್ಲಿ ಬೇರೆ ಕಡೆ ಜಾಗ ಕೊಡಿಸಿ ಮನೆಗಳು ಬೇಕೆಂದರೆ ಆ ಯೋಜನೆ ಮೂಲಕ ಮನೆಗಳನ್ನು ಕಟ್ಟಿಸಿಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ.—ಹೌಸಿಂಗ್ ಬೋರ್ಡಿನಿಂದ ಬೇಕಾದರೆ ಮನೆಗಳನ್ನು ಕಟ್ಟಿಸಿಕೊಡುತ್ತೇನೆಂದು ಮಂತ್ರಿಗಳು ಹೇಳಿದರು, ನಾನು ಕೇಳಿದ ಪ್ರಶ್ನೆಯೇ ಬೇರೆ. ಇದು ಹುಬ್ಬಳ್ಳಿ-ಧಾರವಾಡಿಗೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ನಗರಸಭೆ ಮತ್ತು ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕ ಪ್ರದೇಶದ ಜನರಿಗೆ ಸಿಗತಕ್ಕ ಸೌಲಭ್ಯಗಳಲ್ಲಿ ಆಗತಕ್ಕ ವ್ಯತ್ಯಾಸದ ಬಗ್ಗೆ ಹೇಳಿದ್ದೇನೆ, ಉದಾಹರಣೆಗೆ ಹೇಳಬೇಕಾದರೆ ಅನೇಕ ಮುನಿಸಿಪಾಲಿಟಿಗಳಿಗೆ ಮತ್ತು ನಗರಸಭೆಗಳಿಗೆ ಸ್ವೀಪರ್ಸ್‌ಗೆ ಸಂಬಳ ಕೊಡುವುದಕ್ಕೆ ದುಡ್ಡಿರುವುದಿಲ್ಲ. ಆದರೆ ಹಳ್ಳಿಯಲ್ಲಿ ಎನ್. ಆರ್. ಇ. ಪಿ. ಯೋಜನೆ ಮೂಲಕ ಕಮ್ಯುನಿಟಿ ಹಾಲ್ ಬೇಕಾದರೆ ಕಟ್ಟಬಹುದು, ಶಾಲಾ ಕಟ್ಟಡ ಬಿದ್ದರೆ ರಿಪೇರಿ ಮಾಡಬಹುದು, ಆದರೆ ನಗರಸಭೆಯ ವ್ಯಾಪ್ತಿಯಲ್ಲಿ ಒಂದು ಶಾಲೆ ಬಿದ್ದರೆ ಅದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ನಗರಸಭೆಯಲ್ಲಿ ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡಿರುವುದಿಲ್ಲ, ಲೈಟ್ ಬಿಲ್ ಕಟ್ಟುವುದಕ್ಕೆ ಹಣ ಇರುವುದಿಲ್ಲ. ಅಂಥ ಪರಿಸ್ಥಿತಿ ನಗರ ಪ್ರದೇಶಗಳಲ್ಲಿದೆ. ಹಳ್ಳಿ ಜನರಿಗೆ ಗಾಡಿ, ಎತ್ತು, ಎಮ್ಮೆ ಎಲ್ಲವನ್ನು ಕೊಳ್ಳಲು ಬೇಕಾದ ಸೌಲಭ್ಯ ಇದೆ. ಆದ್ದರಿಂದ, ನಗರಸಭೆ ಎನ್ನುವುದನ್ನು ತೆಗೆದು ಟೌನ್ ಪಂಚಾಯಿತಿ ಎಂದು ಬೇಕಾದರೆ ಮಾಡಿ ಹಳ್ಳಿ ಜನರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೀರೋ ಆ ಎಲ್ಲಾ ಸೌಲಭ್ಯಗಳನ್ನು ನಗರ ಪ್ರದೇಶದ ಜನರಿಗೂ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಮೂಲಭೂತವಾದ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಸಿಗುತ್ತಿರತಕ್ಕ ಸೌಲಭ್ಯಗಳು ನಗರ ಪ್ರದೇಶದ ಜನರಿಗೆ ಸಿಗುತ್ತಿಲ್ಲವೆಂಬುದು ನಿಜ. ಮಾನ್ಯ ಜಸವರಾಜ ಪಾಟೀಲರು ಹೇಳಿದಾಕ್ಷಣ ನಾನು ಹುಬ್ಬಳ್ಳಿ-ಧಾರವಾಡ ಪ್ರದೇಶವನ್ನು ಗ್ರಾಮಾಂತರ ಪ್ರದೇಶ ಎಂದು ಮಾಡುವುದಕ್ಕಾಗುವುದಿಲ್ಲ. ಕಾನೂನಿನಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಆವರು ಆ ರೀತಿ ಮಾಡಬಹುದೆಂದು ಪತ್ರ ಬರೆಯಲಿ ಮತ್ತು ಅಲ್ಲಿನ ನಗರಸಭೆಯವರೂ ಪತ್ರ ಬರೆಯಲಿ. ಆಮೇಲೆ ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ನನಗೂ ಒಂದು ಪ್ರಶ್ನೆ ಕೇಳವ ಅವಕಾಶ ಕೊಡಿ

ಅಧ್ಯಕ್ಷರು.—ಪ್ರಶ್ನೆ ಹಾಕಿದವರಿಗೆ ಎರಡೆರಡು ಉಪ ಪ್ರಶ್ನೆಗಳನ್ನು ಕೇಳಿ ಎಂದು ಹೇಳಿದ್ದೇನೆ ಇದಕ್ಕೆ ನೀವು ಸಹಕಾರಿಸದೆ ಪಾರ್ಲಿಮೆಂಟಿನಲ್ಲಿ ಮಾಡಿದ ಹಾಗೆ ಲ್ಯಾಪ್ಸ್ ಮಾಡಿ ಎಂದರೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮ್ಮ ಮೂಲಕ ಕೇಳುವುದೇನೆಂದರೆ, ಈ ಯೋಜನೆಗಳು ಪಟ್ಟಣ ಪ್ರದೇಶಗಳಿಗೆ ಅನ್ವಯಿಸುವುದಿಲ್ಲ ಅನ್ನುವುದಾದರೆ ಪುರಸಭೆ ಮತ್ತು ನಗರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ? ಗ್ರಾಂಟ್ ಕೊಡುತ್ತೀರಾ ? ವಿಶೇಷ ಕಾರ್ಯಕ್ರಮಗಳನ್ನೇನಾದರೂ ಹಾಕಿಕೊಳ್ಳುತ್ತೀರಾ ? ಎನ್. ಆರ್. ಇ. ಪಿ. ಯೋಜನೆಯಲ್ಲಿ ಅಲ್ಲಿರತಕ್ಕ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಏನಾದರೂ ಹೆಚ್ಚಿನ ಹಣ ಕೊಟ್ಟು ಅವರ ಅಭಿವೃದ್ಧಿಗೋಸ್ಕರ ಕೆಲಸ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಕೇಳಿರತಕ್ಕ ಪ್ರಶ್ನೆಯನ್ನು ನೋಡಿದರೆ ಉಪ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಇದರೂ ಕೂಡ ಮಾನ್ಯ ಸದಸ್ಯರು ಪ್ರಶ್ನೆ ಮಾಡಿರುವುದರಿಂದ ಒಂದೂ ಮಾತು ಹೇಳಬಯಸುತ್ತೇನೆ. ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲವೆಂಬ ಒಂದೇ ಕಾರಣಕ್ಕೋಸ್ಕರ

ಗ್ರಾಮಾಂತರ ಪ್ರದೇಶಗಳ ಜನರಿಗೆ ಸಿಗತಕ್ಕ ಸೌಲಭ್ಯಗಳು ನಗರ ಪ್ರದೇಶದ ಜನರಿಗೆ ಸಿಗುತ್ತಿಲ್ಲ ವೆಂಬುದು ಮುಖ್ಯ ಪ್ರಶ್ನೆ, ನಾನು ಗುಲ್ಬರ್ಗ ಜಿಲ್ಲೆಯ ಎಲ್ಲಾ ಮುನಿಸಿಪಾಲಿಟಿಗಳ ಅಧ್ಯಕ್ಷರನ್ನು ಮತ್ತು ಚೀಫ್ ಆಫೀಸರ್‌ಗಳನ್ನು ಭೇಟಿ ಮಾಡಿದ್ದೇನೆ. ಗುಲ್ಬರ್ಗ ಜಿಲ್ಲೆಯಲ್ಲಿ ಈಗಿನ ಮಟ್ಟದ ತೆರಿಗೆಗಳ ಪ್ರಕಾರ ಪ್ರಕಾರ ವಸೂಲಾಗಿರುವುದು ಶೇಕಡ ೮೦ ಮಾತ್ರ. ಮುನಿಸಿಪಾಲಿಟಿಯಲ್ಲಿರತಕ್ಕ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಇರತಕ್ಕ ತೆರಿಗೆಗಳನ್ನು ವಸೂಲ್ಮಾಡಿದರೆ ತೊಂದರೆಗಳು ಆಷ್ಟಿರುವುದಿಲ್ಲ. ಈಗಾಗಲೇ ಡೆವಲಪ್‌ಮೆಂಟ್ ಗ್ರಾಂಟ್ ಕೊಡುತ್ತಿದ್ದೇವೆ. ಆಕ್ಯಾಯ್ ತೆಗೆದದ್ದರಿಂದ ಅದಕ್ಕೆ ಸಂಬಂಧಪಟ್ಟ ಲಾಸ್ ಆಫ್ ಇನ್‌ಕಂ ಏನಿದೆ...

(ಗೊಂದಲ)

ಶ್ರೀ ಎಂ. ವೀರಪ್ಪಾರ್ಜುನ ಖರ್ಗೆ.—ಅದಕ್ಕೆ ಇಡೀ ಮುನಿಸಿಪಾಲಿಟಿಗಳ ಬಗ್ಗೆ ಹೇಳಿ. ನಾನು ಗುಲ್ಬರ್ಗದ ಪ್ರಶ್ನೆಯನ್ನು ಮಾತ್ರ ಕೇಳಲಿಲ್ಲ. ಇಡೀ ರಾಜ್ಯದ ಪರಿಸ್ಥಿತಿ ಏನಿದೆ ಅದನ್ನು ಪರಿಶೀಲಿಸಲು ಈಗಾಗಲೇ ತಾವೆ ಕಮಿಟಿ ಮಾಡಿದ್ದೇವೆಂದು ಹೇಳಿದಿರಿ. ಆ ಕಮಿಟಿಯ ವರದಿ ಬಂದಮೇಲೆ ಹೆಚ್ಚಿನ ಹಣ ಕೊಡುತ್ತೀರಾ ಅಥವಾ ಮುನಿಸಿಪಾಲಿಟಿಗಳಿಗೆ ಅಡ್‌ಹಾಕ್ ಗ್ರಾಂಟ್ ಕೊಟ್ಟು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ಥಳೀಯ ಸಂಸ್ಥೆಗಳಲ್ಲಿ ಈಗಿರತಕ್ಕ ತೆರಿಗೆ ಮಟ್ಟದಲ್ಲಿ ಎಲ್ಲಾ ತೆರಿಗೆಗಳನ್ನು ವಸೂಲ್ಮಾಡಿದರೆ ೪೦ ಕೋಟಿ ರೂಪಾಯಿ ಬರಬೇಕಾಗುತ್ತದೆ. ಮೊದಲು ಆ ಕೆಲಸವನ್ನು ಮಾಡಬೇಕು, ಆದರೆ ಅದನ್ನು ಮಾಡಿಲ್ಲ. ಆಕ್ಯಾಯ್ ತೆಗೆದದ್ದರಿಂದ ಏನು ನಷ್ಟವಾಗಿದೆ ಅದಕ್ಕೆ ಅನುಸಾರವಾಗಿ ಗ್ರಾಂಟ್ ಕೊಡುತ್ತಿದ್ದೇವೆ. ಎರಡನೆಯದಾಗಿ, ಲೋಕಲ್ ಫೈನಾನ್ಸ್ ಕಮಿಟಿಯ ವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಸರ್ಕಾರದವರು ಅದನ್ನು ಪರಿಶೀಲನೆ ಮಾಡಿ ಅವರು ಕೊಟ್ಟಿರತಕ್ಕ ಶಿಫಾರಸ್ಸುಗಳ ಮೇಲೆ ಬೇಗನೆ ಸೂಕ್ತ ನಿರ್ಣಯ ತೆಗೆದು ಕೊಳ್ಳುತ್ತೇವೆ.

ಶ್ರೀ ಬಸವರಾಜ ಪಾಟೀಲ್.—ಗ್ರಾಮಾಂತರ ಪ್ರದೇಶದ ಜನರಿಗೆ ಸಿಗುತ್ತಿರತಕ್ಕ ಸೌಲಭ್ಯಗಳನ್ನು ನಗರ ಪ್ರದೇಶದವರಿಗೂ ಕೊಡಿ ಎಂದರೆ ಅರಿಯರ್ಸ್ ವಸೂಲಾಗಿಲ್ಲವೆಂದು ಹೇಳುತ್ತೀರಿ. ಹುಬ್ಬಾಬಾದ್ ಮಂತಾದ ನಗರಗಳಲ್ಲಿ ಶಾಲೆಯ ಕಟ್ಟಡ ಬಿದ್ದಿದೆ ಎಂದರೆ ಅದನ್ನು ಕಟ್ಟುವುದಕ್ಕೆ ಹಣ ಇರುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಐ. ಆರ್. ಡಿ. ಪಿ. ಎನ್. ಆರ್. ಇ. ಪಿ. ಯೋಜನೆಗಳನ್ನು ಹೇಗೆ ಮಾಡಿದ್ದೀರಿ ಆ ಪ್ರಕಾರ ನಗರ ಪ್ರದೇಶಗಳಲ್ಲೂ ಮಾಡಿ ಹಣ ಒದಗಿಸುತ್ತೀರಾ ? ನಾವು ಅರಿಯರ್ಸ್ ಅದು ಇದು ಎಂದು ಕೇಳುತ್ತಿಲ್ಲ ಕಾರ್ಯಕ್ರಮ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ. ಉತ್ತರದಲ್ಲಿ ನೀವು ಅದರ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಒಂದು ಕಾರ್ಯಕ್ರಮ ಸರ್ಕಾರದ ಮುಂದಿಲ್ಲ.

ಶ್ರೀ ಬಸವರಾಜಪಾಟೀಲ್.—ಅಧ್ಯಕ್ಷರೇ.....

ಅಧ್ಯಕ್ಷರು.—ತಾವು ಏನು ಹೇಳಿದರೂ ರೆಕಾರ್ಡ್ ಮಾಡಬೇಡಿ ಎಂದು ಹೇಳುತ್ತೇನೆ. ಸ್ವಲ್ಪವಾದರೂ ತಿಳಿವಳಿಕೆ ಇದೆಯೋ ನಿಮಗೆ?

ಶ್ರೀ ಬಸವರಾಜಪಾಟೀಲ್.—ಸ್ವಾಮಿ, ಇದು ಬಹಳ ಮಹತ್ವವಾದ ಪ್ರಶ್ನೆ. ಜನ ಅಲ್ಲಿ ಸಾಯುತ್ತಿದ್ದಾರೆ. ಅದನ್ನು ನೋಡುತ್ತಿದ್ದೇವೆ ನಾವು. ನೆರೆ ಮನೆಯವರಿಗೆ ಎಲ್ಲಾ ಅನುಕೂಲ ಸಿಗುತ್ತಿದೆ ಈ ಮನೆಯವರಿಗೆ ಇಲ್ಲ ಎಂದರೆ ಹೇಗೆ? ಬಹಳ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು.—ನಿಮ್ಮ ಭಾಷಣ ಮುಗಿಯಿತೋ ಇಲ್ಲವೋ? ಈ ರೀತಿ ನೀವು ಪದೇ ಪದೇ ಎದ್ದು ಮಾತನಾಡಿದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ಪಾಟೀಲ್.—ರೋಡ್ ರಿಪೇರಿಗೆ ದುಡ್ಡಿಲ್ಲ. ೬ ತಿಂಗಳಿಂದ ಮುನಿಸಿಪಾಲಿಟಿ ಕಾರ್ಮಿಕರಿಗೆ ಸಂಬಳ ಕೊಟ್ಟಿಲ್ಲ. ಅದಕ್ಕಾಗಿ ಸರ್ಕಾರ ಏನಾದರೂ ಯೋಜನೆ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ೨೦ ಸಾವಿರಕ್ಕಿಂತಲೂ ಕಡಿಮೆ ಜನಸಂಖ್ಯೆಯುಳ್ಳ ಟೌನ್ ಮುನಿಸಿಪಲ್ ಕೌನ್ಸಿಲ್‌ಗಳನ್ನು ಟೌನ್ ಪಂಚಾಯಿತಿಯನ್ನಾಗಿ ಮಾಡಿದರೆ ಹಳ್ಳಿ ಪ್ರದೇಶಗಳು ಎಂದು ಸರ್ಕಾರದವರು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಇದೇ ಸೂತ್ರವನ್ನು ಅನುಸರಿಸಿ ಎನ್‌ಆರ್‌ಇಪಿ, ಐಆರ್‌ಡಿಪಿ, ಆರ್‌ಎಲ್‌ಇಜಿಪಿ, ಕಾರ್ಯಕ್ರಮಗಳಲ್ಲಿ ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಮಾನ್ಯ ಬಸವರಾಜ ಪಾಟೀಲರು ಒಂದು ವಿಷಯವನ್ನು ನೆನಪಿನಲ್ಲಿಟ್ಟಿಕೊಳ್ಳಬೇಕು. ಗುಲ್ಬರ್ಗ ಜಿಲ್ಲೆಯಲ್ಲಿ ವಿಲೇಜ್ ಪಂಚಾಯಿತಿಗಳು ೧೦೦ಕ್ಕೆ ೧೦೦ರಷ್ಟು ತೆರಿಗೆಯನ್ನು ವಸೂಲು ಮಾಡಿದ್ದಾರೆ. ಆದರೆ ನಗರ ಪ್ರದೇಶದಲ್ಲಿರುವ ಮುನಿಸಿಪಾಲಿಟಿಯವರು ಶೇಕಡ ೮೦ರಷ್ಟು ಮಾತ್ರ ವಸೂಲಾತಿ ಮಾಡಿದ್ದಾರೆ. ಅಂಥವರಿಗೆ ಎಲ್ಲಿಂದ ಹಣ ಕೊಡಬೇಕು? ಯಾವ ಯೋಜನೆ ಪ್ರಕಾರ ಕೊಡಬೇಕು? ನಗರಸಭೆಗಳು ತಮ್ಮ ತಮ್ಮ ಸ್ವಶಕ್ತಿ ಮೇಲೆ ನಿಂತುಕೊಂಡು ಕೆಲಸ ಮಾಡತಕ್ಕ ಶಕ್ತಿ ಪಡೆಯಬೇಕಾಗುತ್ತದೆ. ತೆರಿಗೆಗಳನ್ನು ವಸೂಲು ಮಾಡದಿದ್ದರೆ ಯಾವ ಸರ್ಕಾರವೇ ಆಗಲಿ ಅನುದಾನವಾಗಲೀ ಅಥವಾ ಇತರ ಗ್ರ್ಯಾಂಟನ್ನಾಗಲೀ ಕೊಡುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ರಾಯಚೂರಿನ ನಿಜಲಿಂಗಪ್ಪ ಕಾಲೋನಿಯ ಒಳ ರಸ್ತೆಗಳು

೭೦೩. ಶ್ರೀ ಬಸವರಾಜಪಾಟೀಲ್ (ಮಾನ್ವಿ),—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ರಾಯಚೂರಿನ ನಿಜಲಿಂಗಪ್ಪ ಕಾಲೋನಿಯ ಒಳ ರಸ್ತೆಗಳ ದುಸ್ಥಿತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರಸ್ತೆಗಳನ್ನು ದುರಸ್ತಿ ಮಾಡಲು ಯೋಜನೆ ಏನಾದರೂ ಸರ್ಕಾರದವರ ಗಮನದಲ್ಲಿದೆಯೇ?

ಇ) ನಿಜಲಿಂಗಪ್ಪ ಕಾಲೋನಿಯು ನಗರಕ್ಕೆ ಹೋಗುವ ಮಾರ್ಗದಲ್ಲಿಯೂ ರೈಲ್ವೆ ಗೇಟ್‌ಗಳ ಬಳಿ ಭೂಗತ (ಸುರಂಗ) ಮಾರ್ಗವನ್ನು ನಿರ್ಮಿಸುವ ವಿಚಾರ ಯಾವ ಹಂತದಲ್ಲಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ವಸತಿ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ರಾಯಚೂರಿನ ನಿಜಲಿಂಗಪ್ಪ ಕಾಲೋನಿಯನ್ನು ಕರ್ನಾಟಕ ಗೃಹ ಮಂಡಳಿ ತೆಗೆದುಕೊಂಡಿದೆ. ರಸ್ತೆಗಳ ದುರಸ್ತಿ ಕೆಲಸ ಕರ್ನಾಟಕ ಗೃಹ ಮಂಡಳಿ, ತದನಂತರ ರಾಯಚೂರು ನಗರಸಭೆ ರೂಪಿಸಬೇಕಾಗಿದೆ.

ಇ) ಸಾರ್ವಜನಿಕರ ಬೇಡಿಕೆ ರಾಯಚೂರು ನಗರಸಭೆಯ ಪರಿಶೀಲನೆಯಲ್ಲಿದೆ.

ಶ್ರೀ ಬಸವರಾಜ ಪಾಟೀಲ್.—ಒಂದು ಸಂತೋಷದ ವಿಚಾರ ಎಂದರೆ ನಾನು ನಗರಾಭಿವೃದ್ಧಿ ಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ಮಾನ್ಯ ಸಾರಿಗೆ ಮಂತ್ರಿ ವಸತಿ ಮಂತ್ರಿಗಳು ಉತ್ತರ ನೀಡಿದ್ದಾರೆ. ಇದರಿಂದ ಅನುಕೂಲವಾಗಿದೆ ರಸ್ತೆಗಳ ದುಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಂತ್ರಿಗಳು ಹೇಳಿದ್ದಾರೆ. ಆದರೆ ರಿಪೇರಿ ಕೆಲಸ ನಡೆಯುತ್ತಿಲ್ಲ. ದಯವಿಟ್ಟು ಇದಕ್ಕೆ ಗ್ರ್ಯಾಂಟ್ ಕೊಟ್ಟು ಮಾಡಿಸಬೇಕು. ರಾಯಚೂರು ನಗರ ಸಭೆಯವರನ್ನು ಕೇಳಿದಾಗ ಗೃಹ ಮಂಡಳಿಯಿಂದ ೧೧ ಲಕ್ಷ ರೂಪಾಯಿ ಗ್ರ್ಯಾಂಟ್ ಬರಬೇಕಾಗಿದೆ, ಅದನ್ನು ಕೊಟ್ಟರೆ ನಾವು ಕೆಲಸ ಮಾಡುತ್ತೇವೆ ಎಂದು ಹೇಳಿದರು. ೧೯೭೦ರಲ್ಲಿ ಮನೆಗಳನ್ನು ಅಲ್ಲಿ ಕಟ್ಟಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಅಲ್ಲಿ ಒಂದು ಬುಟ್ಟಿ ಮಣ್ಣೂ ಸಹ ಹಾಕಿಲ್ಲ ಮೂರು ಜನ ಶಾಸಕರು ಅದೇ ಕ್ಷೇತ್ರದಲ್ಲಿರುವುದರಿಂದ ಜನ ನಮ್ಮನ್ನು ಕೇಳುತ್ತಿದ್ದಾರೆ. ನನ್ನ 'ಇ' ಪ್ರಶ್ನೆಗೆ ಉತ್ತರವಾಗಿ ಬ್ರಿಡ್ಜ್ ಕಟ್ಟುವ ಸಲುವಾಗಿ ಸಾರ್ವಜನಿಕರಿಂದ ಮಂತಿ ಕೇಳುತ್ತಿದ್ದೇವೆ ಎಂದು